**ಆಯುಕ್ತರು**
**ಕಾರ್ಮಿಕ ಇಲಾಖೆ**

ಕರ್ನಾಟಕ ಸರ್ಕಾರ

"ಕಾರ್ಮಿಕ ಭವನ", 'ಐಟಿಐ ಕಾಲೇಜು ಕಾಂಪೌಂಡ್',
ಬನ್ನೇರುಘಟ್ಟ ರಸ್ತೆ, ಬೆಂಗಳೂರು -560029.
ದೂರವಾಣಿ: 29753078
ಇಮೇಲ್- labour.commissioner42@gmail.com

ಸಂ. ಜಿಜಿಡ್‌ಟಿ/ಸಿಆರ್-30/2023-24 ದಿನಾಂಕ:04.11.2025

## ನೆನಪೋಲೆ

**ವಿಷಯ:** ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧಿಸುವಿಕೆ ಮತ್ತು ನಿವಾರಿಸುವಿಕೆ) ಅಧಿನಿಯಮ-2013ರ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಮತ್ತು ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನಗಳನ್ನು ಜಾರಿಗೊಳಿಸುವ ಬಗ್ಗೆ.

**ಉಲ್ಲೇಖ:**
1. ಮಾನ್ಯ ಸರ್ವೋಚ್ಚ ನ್ಯಾಯಾಲಯವು Miscellaneous Application No.22553/2023 ಪ್ರಕರಣದಲ್ಲಿ ದಿ:12.08.2025 ರಂದು ನೀಡಿರುವ ನಿರ್ದೇಶನಗಳು.
2. ಇದೇ ಸಮಸಂಖ್ಯೆಯ ಕಛೇರಿ ಆದೇಶ, ದಿನಾಂಕ 21.08.2025
3. ಮಾನ್ಯ ಮುಖ್ಯ ಕಾರ್ಯದರ್ಶಿಯವರು, ಕರ್ನಾಟಕ ಸರ್ಕಾರ ಇವರ ಟಿಪ್ಪಣಿ ಸಂ:ಮುಕಾ/11157888/2025, ದಿ: 30.10.2025
4. ಕಾರ್ಯದರ್ಶಿಯವರು, ಕರ್ನಾಟಕ ರಾಜ್ಯ ಮಹಿಳಾ ಆಯೋಗ ಇವರ ಅ.ಸ.ಪ.ಸಂ:ಕರಾಮಾ/SHW/2025, ದಿನಾಂಕ: 31.10.2025

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ಸರ್ವೋಚ್ಚ ನ್ಯಾಯಾಲಯವು Miscellaneous Application No.22553/2023 ಪ್ರಕರಣದಲ್ಲಿ ದಿನಾಂಕ:12.08.2025 ರಂದು ಈ ಕೆಳಕಂಡಂತೆ ನಿರ್ದೇಶನಗಳನ್ನು ನೀಡಿರುತ್ತದೆ.

1. It is hence responsibility of the Labour Department to ensure that Internal Complaints committee is constituted by every employer of a workplace and if no such Committee has been constituted to take steps under the provisions of the POSH Act. In order to ascertain as to whether the Employer of a workplace as defined under the POSH act has constituteed the Internal complaints in terms of secton 4 of the POSH Act, it is necessary to have the aforesaid data and to take steps wherever there has been no such constitution of the committee. It is for this purpose that the survey was directed vide order dated 03.12.2024.
2. Since a direction is now issued to have the survey conducted with the assistance of the Labour Commissioners in the District and the Chief Labour Commissioner of the State, the said exercise shall be conducted within a period of six weeks from today if not already completed.

ಅದರಂತೆ, ಈ ಕಛೇರಿಯ ಉಲ್ಲೇಖ-(2)ರ ಕಛೇರಿ ಆದೇಶದನ್ವಯ ಎಲ್ಲಾ ಕಾರ್ಮಿಕ ಅಧಿಕಾರಿಗಳು ತಮ್ಮ ಕಾರ್ಯವ್ಯಾಪ್ತಿಯಲ್ಲಿ 10 ಕ್ಕಿಂತ ಹೆಚ್ಚು ಕಾರ್ಮಿಕರನ್ನು ನೇಮಕಾತಿ ಮಾಡಿಕೊಂಡಿರುವ ಎಲ್ಲಾ ವಾಣಿಜ್ಯ ಸಂಸ್ಥೆಗಳು/ ಉದ್ದಿಮೆಗಳು ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧಿಸುವಿಕೆ ಮತ್ತು ನಿವಾರಿಸುವಿಕೆ) ಅಧಿನಿಯಮ-2013ರ ಆಂತರಿಕ ದೂರು ಸಮಿತಿಗಳು ರಚನೆಯಾಗಿರುವುದನ್ನು ಖಾತರಿಪಡಿಸಿಕೊಂಡು ನಿಗದಿತ ನಮೂನೆಯಲ್ಲಿ ಮಾಹಿತಿಯನ್ನು ಪಡೆದು ಜಿಲ್ಲಾಡಳಿತಕ್ಕೆ ವರದಿಯನ್ನು ಸಲ್ಲಿಸಲು ಸೂಚಿಸಲಾಗಿತ್ತು.

ಮಾನ್ಯ ಮುಖ್ಯ ಕಾರ್ಯದರ್ಶಿಯವರು, ಕರ್ನಾಟಕ ಸರ್ಕಾರ ಇವರ ಉಲ್ಲೇಖ-(3)ರ ಟಿಪ್ಪಣಿಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು Miscellaneous Application No.22553/2023 ಪ್ರಕರಣದಲ್ಲಿ ದಿನಾಂಕ:12.08.2025 ರಂದು ನೀಡಿರುವ ನಿರ್ದೇಶನಗಳನ್ವಯ ಕೂಡಲೇ ಸೂಕ್ತ ಕ್ರಮ ಕೈಗೊಂಡು, ಕೈಗೊಂಡ ಕ್ರಮದ ಮಾಹಿತಿಯೊಂದಿಗೆ ದಿನಾಂಕ 31.11.2025 ರೊಳಗಾಗಿ ಅನುಪಾಲನಾ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿ. ಅದರ ಪ್ರತಿಯನ್ನು ಮುಖ್ಯ ಕಾರ್ಯದರ್ಶಿಯವರ ಕಛೇರಿಗೆ ಸಲ್ಲಿಸಲು ಸೂಚಿಸಿರುತ್ತಾರೆ (ಪ್ರತಿ ಲಗತ್ತಿಸಿದೆ).

ಕಾರ್ಯದರ್ಶಿಯವರು, ಕರ್ನಾಟಕ ರಾಜ್ಯ ಮಹಿಳಾ ಆಯೋಗ ಇವರ ಉಲ್ಲೇಖ-(4)ರ ಅ.ಸ.ಪತ್ರದಲ್ಲಿ ದಿನಾಂಕ: 14.10.2025 ರಂದು ಮಾನ್ಯ ಅಧ್ಯಕ್ಷರು, ರಾಷ್ಟ್ರೀಯ ಮಹಿಳಾ ಆಯೋಗ, ಇವರೊಂದಿಗೆ ನಡೆದ ಸಭೆಯಲ್ಲಿ ಚರ್ಚಿಸಿದಂತೆ, ಎಲ್ಲಾ ಜಿಲ್ಲಾಧಿಕಾರಿಗಳು, ತಮ್ಮ ಜಿಲ್ಲೆಯಲ್ಲಿನ ಸರ್ಕಾರಿ, ಸಾರ್ವಜನಿಕ/ಖಾಸಗಿ ವಲಯದ ಎಲ್ಲಾ ಸಂಸ್ಥೆಗಳಲ್ಲಿ ಆಂತರಿಕ ದೂರು ಸಮಿತಿಗಳನ್ನು ರಚನೆ ಮಾಡಲಾಗಿದೆಯೇ ಅಥವಾ ಇಲ್ಲವೇ ಎಂಬುದರ ಬಗ್ಗೆ ಸರ್ವೆ ಮಾಡಿ ಆಂತರಿಕ ದೂರು ಸಮಿತಿಗಳು ರಚನೆಯಾಗದೇ ಇರುವ ಸಂಸ್ಥೆಗಳಿಗೆ ಕೆಲಸದ ಸ್ಥಳಗಳಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧಿಸುವಿಕೆ, ನಿವಾರಿಸುವಿಕೆ) 2013ರ ಕಾಯ್ದೆಯ ಸೆಕ್ಷನ್ 26ರ ಪ್ರಕಾರ ಹಾಗೂ Sub Section 1 of Section 4ರ ಪ್ರಕಾರ ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಹಾಗೂ ರಚನೆಯಾಗಿರುವ ಸಮಿತಿಯ ಮಾಹಿತಿಯನ್ನು She-Box Portal ನಲ್ಲಿ ಲಭ್ಯವಿರುವ ಮಾಹಿತಿಯನ್ನು ಪರಿಶೀಲಿಸಲಾಗಿ ಇನ್ನೂ ಹೆಚ್ಚು ಸಂಸ್ಥೆಗಳಲ್ಲಿ ಆಂತರಿಕ ದೂರು ಸಮಿತಿಯನ್ನು ರಚನೆ ಮಾಡದೇ ಇರುವುದನ್ನು ಗಮನಿಸಲಾಗಿದ್ದು, ಆಂತರಿಕ ದೂರು ಸಮಿತಿ ರಚನೆ ಮಾಡದೇ ಉಳಿದ ಸರ್ಕಾರಿ ಕಛೇರಿ, ಖಾಸಗಿ ಸಂಸ್ಥೆ ಹಾಗೂ ಉದ್ದಿಮೆಗಳಲಿ ರಚನೆ ಮಾಡಲು ಒಂದು ತಿಂಗಳೊಳಗೆ ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಿರುತ್ತಾರೆ. (She Box Portal ನಲ್ಲಿ ಲಭ್ಯವಿರುವ ಮಾಹಿತಿಯನ್ನು ಲಗತ್ತಿಸಿದೆ) ಆದ್ದರಿಂದ ಜಿಲ್ಲೆಯಲ್ಲಿ ಇನ್ನೂ ಆಂತರಿಕ ದೂರು ಸಮಿತಿಯನ್ನು ರಚನೆ ಮಾಡದೇ ಇರುವ ಸರ್ಕಾರಿ ಕಛೇರಿ, ಖಾಸಗಿ ಸಂಸ್ಥೆ ಹಾಗೂ ಉದ್ದಿಮೆಗಳಲ್ಲಿ ತುರ್ತಾಗಿ ಸಮಿತಿಯನ್ನು ರಚಿಸಿ ಮತ್ತು ಈಗಾಗಲೇ ರಚನ ಮಾಡಿರುವ ಸಮಿತಿಗಳನ್ನು ಇತರೆ ಮಾಹಿತಿಯೊಂದಿಗೆ SHe Box Portal ನಲ್ಲಿ ಇಂಧೀಕರಿಸಲು ತಿಳಿಸಲಾಗಿದೆ.

ಆದ್ದರಿಂದ, ಜಿಲ್ಲೆಯಲ್ಲಿ ಇನ್ನೂ ಆಂತರಿಕ ದೂರು ಸಮಿತಿಯನ್ನು ರಚನೆ ಮಾಡದೇ ಇರುವ ಖಾಸಗಿ ಸಂಸ್ಥೆ ಹಾಗೂ ಉದ್ದಿಮೆಗಳಲ್ಲಿ ತುರ್ತಾಗಿ ಸಮಿತಿಯನ್ನು ರಚಿಸಿ ಮತ್ತು ಈಗಾಗಲೇ ರಚನೆ ಮಾಡಿರುವ ಸಮಿತಿಗಳ ಮಾಹಿತಿಯೊಂದಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ, SHe Box Portal ನಲ್ಲಿ ಅಳವಡಿಸುವುದನ್ನು ಖಾತ್ರಿಪಡಿಸಿಕೊಂಡು ಈ ಬಗ್ಗೆ ಜಿಲ್ಲಾಡಳಿತಕ್ಕೆ ವರದಿಯನ್ನು ಸಲ್ಲಿಸಲು ಎಲ್ಲಾ ಕಾರ್ಮಿಕ ಅಧಿಕಾರಿಗಳು ಕ್ರಮವಹಿಸಲು ಸೂಚಿಸಲಾಗಿದೆ.

ಎಲ್ಲಾ ಉಪ ಕಾರ್ಮಿಕ ಆಯುಕ್ತರುಗಳು ತಮ್ಮ ಕಾರ್ಯವ್ಯಾಪ್ತಿಯಲ್ಲಿನ ಎಲ್ಲಾ ಸಂಸ್ಥೆಗಳು/ ಉದ್ದಿಮೆಗಳಲ್ಲಿ ಆಂತರಿಕ ದೂರು ಸಮಿತಿಯನ್ನು ರಚನೆ ಆಗಿರುವುದನ್ನು ಮತ್ತು ಈ ಬಗ್ಗೆ ಮಾಹಿತಿಯನ್ನು SHe Box Portal ನಲ್ಲಿ ಅಳವಡಿಸಿರುವುದನ್ನು ಖಾತ್ರಿ ಪಡಿಸಿಕೊಳ್ಳುವ ಬಗ್ಗೆ ಮೇಲುಸ್ತುವಾರಿ ವಹಿಸಲು ಈ ಮೂಲಕ ಸೂಚಿಸಲಾಗಿದೆ.

ಆಯುಕ್ತರು
**ಕಾರ್ಮಿಕ ಇಲಾಖೆ**

**ಇವರಿಗೆ,**

1. ಎಲ್ಲಾ ಉಪ ಕಾರ್ಮಿಕ ಆಯುಕ್ತರುಗಳು
2. ಎಲ್ಲಾ ಕಾರ್ಮಿಕ ಅಧಿಕಾರಿಗಳು

**ಪ್ರತಿಯನ್ನು**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, ವಿಕಾಸ ಸೌಧ, ಬೆಂಗಳೂರು
2. ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಹಿಳಾ ಆಯೋಗ, ನಂ. 107, ಕಾವೇರಿ ಭವನ, 1ನೇ ಮಹಡಿ, ಕರ್ನಾಟಕ ಗೃಹ ಮಂಡಳಿ ಕಟ್ಟಡ, ಕೆ.ಜಿ.ರಸ್ತೆ, ಬೆಂಗಳೂರು -09
3. ಅಪರ ಕಾರ್ಮಿಕ ಆಯುಕ್ತರು, ಆಡಳಿತ & ಲೆಕ್ಕಪತ್ರ /ಕೈಗಾರಿಕಾ ಬಾಂಧವ್ಯ ಶಾಖೆ, ಬೆಂಗಳೂರು
4. ಜಂಟಿ ಕಾರ್ಮಿಕ ಆಯುಕ್ತರು, ಕನಿಷ್ಠ ವೇತನ ಶಾಖೆ, ಬೆಂಗಳೂರು
5. ಪತ್ರಾಂಕಿತ ವ್ಯವಸ್ಥಾಪಕರು, ಆಡಳಿತ ಶಾಖೆ, ಬೆಂಗಳೂರು
6. ಕಾರ್ಮಿಕ ಆಯುಕ್ತರ ಆಪ್ತ ಸಹಾಯಕರು
7. ಕಛೇರಿ ಪ್ರತಿ

ಡಾ. ಶಾಲಿನಿ ರಜನೀಶ್, ಭಾ.ಆ.ಸೇ.,
ಮುಖ್ಯ ಕಾರ್ಯದರ್ಶಿ
Dr. SHALINI RAJNEESH, I.A.S.,
Chief Secretary

ಕರ್ನಾಟಕ ಸರ್ಕಾರ
Government of Karnataka

ಸಂಖ್ಯೆ: ಮುಕಾ/1157888 /2025

30ನೇ ಅಕ್ಟೋಬರ್, 2025.

**ನ್ಯಾಯಾಲಯ ಪ್ರಕರಣ**
**ತುರ್ತು**

**ಟಿಪ್ಪಣಿ**

ಮಾನ್ಯ ಸರ್ವೋಚ್ಚ ನ್ಯಾಯಾಲಯವು **Miscellaneous Application ಡೈರಿ ಸಂಖ್ಯೆ: 22553/2023** ರ ಪ್ರಕರಣದಲ್ಲಿ ದಿನಾಂಕ: 12-08-2025 ರಂದು ನೀಡಿರುವ ಆದೇಶ ಹಾಗೂ ಅದರ ಅಡಕಗಳ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿದೆ.

ಸದರಿ ಆದೇಶದಲ್ಲಿ, The Sexual Harassment of Women at Workplace (Prevention, Prohibition and Redressal) Act, 2013 (PoSH Act) ರ ಅನುಷ್ಠಾನ ಸಂಬಂಧ ರಚನೆಯಾಗಿರುವ ಆಂತರಿಕ ದೂರು ಸಮಿತಿಗಳು ಮತ್ತು ಸ್ಥಳೀಯ ಸಮಿತಿಗಳ ಸಮೀಕ್ಷೆ ನಡೆಸುವುದು ಹಾಗೂ ಸಮೀಕ್ಷಾ ದತ್ತಾಂಶವನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸುವುದು ಸೇರಿದಂತೆ ಕೆಲವೊಂದು ಪ್ರಮುಖ ನಿರ್ದೇಶನಗಳನ್ನು ನೀಡುತ್ತಾ, ಸದರಿ ನಿರ್ದೇಶನಗಳನ್ವಯ ಅನುಸರಣೆಯನ್ನು ಖಚಿತಪಡಿಸಿಕೊಳ್ಳಲು ಸೂಚಿಸಿರುತ್ತದೆ.

ಆದ್ದರಿಂದ, ಈ ಬಗ್ಗೆ ವೈಯಕ್ತಿಕ ಗಮನಹರಿಸಿ, ಸದರಿ ಆದೇಶದಲ್ಲಿ ನೀಡಿರುವ ನಿರ್ದೇಶನಗಳನ್ವಯ ಕೂಡಲೇ ಸೂಕ್ತ ಕ್ರಮ ಕೈಗೊಂಡು, ಕೈಗೊಂಡ ಕ್ರಮದ ಮಾಹಿತಿಯೊಂದಿಗೆ **ದಿನಾಂಕ: 30-11-2025 ರೊಳಗಾಗಿ** ತಪ್ಪದೇ ಅನುಪಾಲನಾ ವರದಿಯನ್ನು ಮಾನ್ಯ ನ್ಯಾಯಾಯಕ್ಕೆ ಸಲ್ಲಿಸಿ, ಅದರ ಪ್ರತಿಯನ್ನು ಈ ಕಛೇರಿಗೆ ಸಲ್ಲಿಸುವಂತೆ ಸೂಚಿಸಿದೆ.

666
4/11/25

**(ಡಾ. ಶಾಲಿನಿ ರಜನೀಶ್)**
ಸರ್ಕಾರದ ಮುಖ್ಯ ಕಾರ್ಯದರ್ಶಿ

**ಇವರಿಗೆ:**

1) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಾರ್ಮಿಕ ಇಲಾಖೆ, ವಿಕಾಸಸೌಧ.
2) ಸರ್ಕಾರದ ಕಾರ್ಯದರ್ಶಿ, ಮಹಿಳೆಯರ & ಮಕ್ಕಳ ಅಭಿವೃದ್ಧಿ ಹಾಗೂ ವಿಶೇಷಚೇತನರ & ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ.

ಕರ್ನಾಟಕ ಸರ್ಕಾರ

# ಕರ್ನಾಟಕ ರಾಜ್ಯ ಮಹಿಳಾ ಆಯೋಗ

ರೂಪ. ಆರ್., ಬಿ.ಎ.ಎಲ್., ಎಲ್‌ಎಲ್.ಬಿ., ಕೆ.ಎ.ಎಸ್., (ಆಯ್ಕೆ ಶ್ರೇಣಿ)
ಕಾರ್ಯದರ್ಶಿ

ಸಂಖ್ಯೆ:ಅ.ಸ.ಪ.ಸಂ:ಕರಾಮಆ/SHW/2025

ದಿನಾಂಕ:31-10-2025

ಮಾನ್ಯರೇ,

ವಿಷಯ: ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ(ತಡೆಗಟ್ಟುವಿಕೆ, ನಿಷೇಧಿಸುವಿಕೆ, ನಿವಾರಿಸುವಿಕೆ)2013ರ ಕಾಯ್ದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಮತ್ತು ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನಗಳನ್ನು ಜಾರಿಗೊಳಿಸುವ ಕುರಿತು.

ಉಲ್ಲೇಖ:
1. ಮಾನ್ಯ ಸರ್ವೋಚ್ಚ ನ್ಯಾಯಾಲಯದ ಪ್ರಕರಣ ಸಿ.ಎ.ನಂ.2482/2014, ದಿನಾಂಕ:03.12.2024ರ ಆದೇಶದಂತೆ.
2. ಎನ್.ಸಿ.ಡಬ್ಲ್ಯೂ. ನಂ:ಹೆಚ್.ಸಿ.ಪಿ/12/2024 ದಿನಾಂಕ:04.12.2024.
3. ಸರ್ಕಾರದ ಸುತ್ತೋಲೆ ಸಂಖ್ಯೆ:ಮಮಇ/55/ಕೆ.ಎಸ್.ಡಬ್ಲ್ಯೂ/2024, ಬೆಂಗಳೂರು ದಿನಾಂಕ:13.09.2024.
4. ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರ ರವರ ಪತ್ರ ಸಂಖ್ಯೆ:ಅ.ಸ.ಪ.ಸಂ:ಕರಾಮಆ/SHW/2024 ದಿನಾಂಕ:02.01.2025, 23.01.2025 ಹಾಗೂ 11.03.2025.
5. ರಾಷ್ಟ್ರೀಯ ಮಹಿಳಾ ಆಯೋಗ, ನವದೆಹಲಿ, ಇವರ ಪತ್ರ ಸಂಖ್ಯೆ:ಹೆಚ್.ಸಿ.ಪಿ/12/2024, ದಿನಾಂಕ:04.12.2024.
6. ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಹಿಳಾ ಆಯೋಗ ರವರ ಪತ್ರ ಸಂಖ್ಯೆ: ಅ.ಸ.ಪ.ಸಂ:ಕರಾಮಆ/SHW/2024-25 ದಿನಾಂಕ:23.01.2025, 25.02.2025, 28.04.2025 ಹಾಗೂ 04.07.2025.
7. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಟಿಪ್ಪಣಿ ಸಂಖ್ಯೆ:ಮುಕಾ:11135851:2025 ದಿನಾಂಕ:27.10.2025.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ(1)ರ ಆದೇಶದಲ್ಲಿ ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ(ತಡೆಗಟ್ಟುವಿಕೆ, ನಿಷೇಧಿಸುವಿಕೆ, ನಿವಾರಿಸುವಿಕೆ) 2013ರ ಕಾಯ್ದೆಗೆ ಸಂಬಂಧಿಸಿದಂತೆ, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಪ್ರಕರಣದ ಸಂಖ್ಯೆ:2482/2014ರ ಪ್ರಕರಣದಲ್ಲಿ ಸೂಕ್ತ ನಿರ್ದೇಶನಗಳನ್ನು ನೀಡಿ ಕ್ರಮ ಕೈಗೊಳ್ಳಲು ಸೂಚನೆಯನ್ನು ನೀಡಲಾಗಿರುತ್ತದೆ. ಅದರಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ದೇಶನಗಳನ್ನು ಪಾಲಿಸಲು ಹಾಗೂ ಸೂಕ್ತ ಕ್ರಮ ಕೈಗೊಳ್ಳಲು ಉಲ್ಲೇಖಿತ(2) ರಿಂದ (6)ರ ಪತ್ರಗಳಲ್ಲಿ ಈಗಾಗಲೇ ಸೂಚನೆಗಳನ್ನು ನೀಡಲಾಗಿದೆ.

ಉಲ್ಲೇಖ(7)ರಂತೆ ದಿನಾಂಕ:14-10-2025ರಂದು ಮಾನ್ಯ ಅಧ್ಯಕ್ಷರು, ರಾಷ್ಟ್ರೀಯ ಮಹಿಳಾ ಆಯೋಗ, ನವದೆಹಲಿ, ಇವರೊಂದಿಗೆ ನಡೆಸಿದ ಸಭೆಯಲ್ಲಿ ಚರ್ಚಿಸಿದಂತೆ, ಎಲ್ಲಾ ಜಿಲ್ಲಾಧಿಕಾರಿಗಳು ತಮ್ಮ ಜಿಲ್ಲೆಯಲ್ಲಿನ ಸರ್ಕಾರಿ, ಸಾರ್ವಜನಿಕ/ಖಾಸಗಿ ವಲಯದ (ಕಾರ್ಖಾನೆಗಳು, ಗಾರ್ಮೆಂಟ್ಸ್, ಸ್ವಯಂ ಸೇವಾ ಸಂಘ-ಸಂಸ್ಥೆಗಳು, ವಿಶ್ವವಿದ್ಯಾಲಯಗಳು, ಇತ್ಯಾದಿ) ಎಲ್ಲಾ ಸಂಸ್ಥೆಗಳಲ್ಲಿ ಆಂತರಿಕ ದೂರು ಸಮಿತಿಗಳನ್ನು ರಚನೆ ಮಾಡಲಾಗಿದೆಯೇ ಅಥವಾ ಇಲ್ಲವೇ ಎಂಬುದರ ಬಗ್ಗೆ ಸರ್ವೆ ಮಾಡಿ ಆಂತರಿಕ ದೂರು ಸಮಿತಿಗಳು ರಚನೆಯಾಗದೇ ಇರುವ ಸಂಸ್ಥೆಗಳಿಗೆ ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ(ತಡೆಗಟ್ಟುವಿಕೆ, ನಿಷೇಧಿಸುವಿಕೆ, ನಿವಾರಿಸುವಿಕೆ) 2013ರ ಕಾಯ್ದೆಯ ಸೆಕ್ಷನ್ 26ರ ಪ್ರಕಾರ ಹಾಗೂ Sub Section 1 of Section 4ರ ಪ್ರಕಾರ ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಹಾಗೂ ರಚನೆಯಾಗಿರುವ ಸಮಿತಿಯ ಮಾಹಿತಿಯನ್ನು SHe-Box Portal ನಲ್ಲಿ ಇಂಧೀಕರಿಸಲು ಸೂಚಿಸಲಾಗಿತ್ತು. ಆದರೆ SHe-Box Portal ನಲ್ಲಿ ಲಭ್ಯವಿರುವ ಮಾಹಿತಿಯನ್ನು ಪರಿಶೀಲಿಸಲಾಗಿ ಇನ್ನೂ ಹೆಚ್ಚು ಸಂಸ್ಥೆಗಳಲ್ಲಿ ಅಂತರಿಕ ದೂರು ಸಮಿತಿಯನ್ನು ರಚನೆ ಮಾಡದೇ ಇರುವುದನ್ನು ಗಮನಿಸಲಾಗಿದ್ದು, ಆಂತರಿಕ ದೂರು ಸಮಿತಿ ರಚನೆ ಮಾಡದೇ ಉಳಿದ ಸರ್ಕಾರಿ ಕಛೇರಿ, ಖಾಸಗಿ ಸಂಸ್ಥೆ ಹಾಗೂ ಉದ್ದಿಮೆಗಳಲ್ಲಿ ರಚನೆ ಮಾಡಲು ಒಂದು ತಿಂಗಳೊಳಗೆ ಕ್ರಮ ಕೈಗೊಳ್ಳುವಂತೆ ನಿರ್ದೇಶಿಸಿರುತ್ತಾರೆ. (SHe-Box Portal ನಲ್ಲಿ ಲಭ್ಯವಿರುವ ಮಾಹಿತಿಯನ್ನು ಲಗತ್ತಿಸಿದೆ) ಆದ್ದರಿಂದ ಜಿಲ್ಲೆಯಲ್ಲಿ ಇನ್ನೂ ಆಂತರಿಕ ದೂರು ಸಮಿತಿಯನ್ನು ರಚನೆ ಮಾಡದೇ ಇರುವ ಸರ್ಕಾರಿ ಕಛೇರಿ, ಖಾಸಗಿ ಸಂಸ್ಥೆ ಹಾಗೂ ಉದ್ದಿಮೆಗಳಲ್ಲಿ ತುರ್ತಾಗಿ ಸಮಿತಿಯನ್ನು ರಚಿಸಿ ಮತ್ತು ಈಗಾಗಲೇ ರಚನೆ ಮಾಡಿರುವ ಸಮಿತಿಗಳನ್ನು ಇತರೇ ಮಾಹಿತಿಯೊಂದಿಗೆ SHe-Box Portal ನಲ್ಲಿ ಇಂಧೀಕರಿಸಲು ತಿಳಿಸಲಾಗಿದೆ.

ಅಅಅ
4/11/25

➢ 2

ನಂ. 107, 1ನೇ ಮಹಡಿ, ಕೆ.ಹೆಚ್.ಬಿ. ಬ್ಲಾಕ್, ಕಾವೇರಿ ಭವನ, ಬೆಂಗಳೂರು – 560 009.
ದೂರವಾಣಿ (ಕಛೇರಿ) : 080–22216485
Website : https://kscw.karnataka.gov.in / ಇ–ಮೇಲ್ : kscwbang123@gmail.com

ಮುಂದುವರೆದು ಉಲ್ಲೇಖಿತ(2)ರ ಟಿಪ್ಪಣಿಯಲ್ಲಿ ಅಸಂಘಟಿತ ವಲಯ, ಮನೆ ಕೆಲಸದ ಮಹಿಳೆಯರು (Domestic Workers), 10ಕ್ಕಿಂತ ಕಡಿಮೆ ಉದ್ಯೋಗಿಗಳಿರುವ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಮಹಿಳೆಯರಿಗೆ ಉಂಟಾಗುವ ಲೈಂಗಿಕ ಕಿರುಕುಳದ ಕುರಿತು ದೂರು ಸಲ್ಲಿಸಲು LCC ಸಮಿತಿ ರಚನೆಯಾಗಿದ್ದು, ಈ ಕುರಿತು ಜಿಲ್ಲಾಡಳಿತಗಳು ಗ್ರಾಮ ಮಟ್ಟದಲ್ಲಿ, ವಾರ್ಡ್ ಮಟ್ಟದಲ್ಲಿ ಭಿತ್ತಿ ಪತ್ರ/ಸುದ್ದಿವಾಹಿನಿ ಹಾಗೂ ಸಾಮಾಜಿಕ ಜಾಲತಾಣಗಳ ಮೂಲಕ ಹೆಚ್ಚು ಪ್ರಸಾರ ಮಾಡಿ ಅರಿವು ಮೂಡಿಸಬೇಕಾಗಿದೆ ಎಂದು ಸೂಚಿಸಿರುತ್ತಾರೆ. ಈ ಸಂಬಂಧ ಸೂಕ್ತ ಕ್ರಮ ಕೈಗೊಂಡು, ಕೈಗೊಂಡ ಕ್ರಮದ ಮಾಹಿತಿಯನ್ನು ಆಯೋಗಕ್ಕೆ ಕಳುಹಿಸಿ ಕೊಡುವಂತೆ ಕೋರಿದೆ. (Email ID:kscwbang123@gmail.com)

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

**ಇವರಿಗೆ:**

ಜಿಲ್ಲಾಧಿಕಾರಿಗಳು,

ಎಲ್ಲಾ 31 ಜಿಲ್ಲೆಗಳು.

**ಪ್ರತಿಯನ್ನು:**

1. ಅಪರ ಜಿಲ್ಲಾಧಿಕಾರಿಗಳು, ಎಲ್ಲಾ 31 ಜಿಲ್ಲಗಳು.
2. ಕಾರ್ಮಿಕ ಆಯುಕ್ತರು, ಕಾರ್ಮಿಕ ಇಲಾಖೆ, ಬೆಂಗಳೂರು.
3. ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ , ಎಲ್ಲಾ 31 ಜಿಲ್ಲೆಗಳು.
4. ಜಿಲ್ಲಾ ಕಾರ್ಮಿಕ ಆಯುಕ್ತರು, ಎಲ್ಲಾ 31 ಜಿಲ್ಲೆಗಳು.